**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 6411/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಅಬೂಬ್ ಬಕ್ಕರ್ | **ಚಾ.ಸಾ.-8** |
| **ತಂದೆಯ ಹೆಸರು** | - | ಅಸ್ಲಾಂ ಪಾಷ | **ಫ್ರಾ.ಸಾ.-6** |
| **ವಯಸ್ಸು** | - | 31 ವರ್ಷ | |
| **ಉದ್ಯೋಗ** | - | ವ್ಯಾಪಾರ | |
| **ವಾಸಸ್ಥಳಃ** | - | ಮದ್ದೂರು | |

ದಿನಾಂಕಃ 23.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಸಾಕ್ಷಿಗೆ ನಿ.ಪಿ. 6 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರೀ ಸಹಿಯನ್ನು ನಿ.ಪಿ. 6(ಬಿ) ಎಂದು, ನಾನು ನಿ.ಪಿ. 6 ಕ್ಕೆ ಚನ್ನಪಟ್ಟಣದ ಪೋಲೀಸ್ ಠಾಣೆಯಲ್ಲಿ ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ. 6 ರಲ್ಲಿ ಏನು ಬರೆದಿರುತ್ತದೆಯೆಂದು ನನಗೆ ಗೊತ್ತಿರುವುದಿಲ್ಲ. ನಿ.ಪಿ. 6 ರ ಸಮಯದಲ್ಲಿ ಈಗ ನ್ಯಾಯಾಲಯದಲ್ಲಿ ವಿಸಿ ಮುಖಾಂತರ ಹಾಜರಿರುವ ಆರೋಪಿಯನ್ನು ನೋಡಿರುವುದಿಲ್ಲ ಹಾಗೂ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಮ್ಮ ಅಂಗಡಿಯಿಂದ ಪೋಲೀಸರು 4-5 ಮೊಬೈಲ್ ಗಳನ್ನು ಪಡೆದುಕೊಂಡು ಹೋಗಿದ್ದರು, ಅವುಗಳು ಇಬ್ಬರು ಹುಡುಗರು ಕಳ್ಳತನ ಮುಖಾಂತರ ತಂದು ನಮ್ಮ ಅಂಗಡಿಗೆಗೆ ರಿಪೇರಿಗಾಗಿ ಕೊಟ್ಟಿರುತ್ತಾರೆಂದು ಹೇಳಿರುತ್ತಾರೆ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ದಿನಾಂಕಃ 06.01.2020 ರಂದು ಬೆಳಗ್ಗೆ 09.30 ರಿಂದ 10.30 ಗಂಟೆ ಸಮಯದಲ್ಲಿ ಆರೋಪಿತನಾದ ವಿಷ್ಣು ಎಂಬುವವರು ಕಳ್ಳತನ ಮಾಡಿಕೊಂಡು ಬಂದಿದ್ದ 5 ಮೊಬೈಲ್

ಗಳನ್ನು ನಮ್ಮ ಅಂಗಡಿಗೆ ರಿಪೇರಿಗಾಗಿ ಕೊಟ್ಟಿದ್ದು, ಸದರೀ ಮೊಬೈಲ್ ನ್ನು ನಮ್ಮ ಅಂಗಡಿಯಿಂದ ವಶಪಡಿಸಿಕೊಳ್ಳುವ ಸಲುವಾಗಿ ಆರೋಪಿಯ ಜೊತೆ ನಮ್ಮ ಅಂಗಡಿಯಲ್ಲಿ ನಿ.ಪಿ. 6 ರಂತೆ ಚಾ,ಸಾ. 9 ಮತ್ತು 10 ಹಾಗೂ ನನ್ನ ಸಮಕ್ಷಮ ಮಹಜರ್ ನ್ನು ಮಾಡಿ, 5 ಮೊಬೈಲ್ ಗಳನ್ನು ನಮ್ಮ ಅಂಗಡಿಯಿಂದ ವಶಪಡಿಕೊಂಡರು ಎಂರದೆಸ ರಿಯಲ್ಲ, ಸದರೀ ಸಮಯದಲ್ಲಿ ನಿ.ಪಿ. 6 ಕ್ಕೆ ಚಾ.ಸಾ. 9 ಮತ್ತು 10 ರವರೂ ಸಹ ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ಸದರೀ ಸಂದರ್ಭದಲ್ಲಿ ದಿನಾಂಕಃ 06.09.2021 ರಂದು ವಿಷ್ಣು ಎಂಬ ವ್ಯಕ್ತಿಯು ನಮ್ಮ ಅಂಗಡಿಗೆ ರಿಪೇರಿಗಾಗಿ ಕೊಟ್ಟಿದ್ದ 5 ಫೋನ್ ಗಳನ್ನು ಪೋಲೀಸರು ನಮ್ಮ ಸಮಕ್ಷಮ ನಮ್ಮ ಅಂಗಡಿಯಲ್ಲಿ ಬೆಳಗ್ಗೆ 09.30 ರಿಂದ 10.00 ಗಂಟೆಯವರೆಗೆ ಮಹಜರ್ ಮಾಡಿ ವಶಪಡಿಸಿಕೊಂಡಿರುತ್ತಾರೆಂದು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆಂದರೆ ಸರಿಯಲ್ಲ. ಸದರೀ ಹೇಳಿಕೆಯನ್ನು ನಿ.ಪಿ. 12 ಎಂದು ಗುರುತಿಸಲಾಯಿತು. ನಿ.ಪಿ. 12 ರಲ್ಲಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ,

**ಪಾಟೀ ಸವಾಲು ಆರೋಪಿ ಪರ ವಕೀಲರುಃ ವೈಸಿಪಿ (ಡಿಎಲ್ ಎಸ್ ಎ ವತಿಯಿಂದ ) ರವರಿಂದ**

ನಾನು ಕಳೆದ 9 ವರ್ಷದಿಂದ ಮೊಬೈಲ್ ಅಂಗಡಿಯನ್ನು ನಡೆಸುತ್ತಿರುತ್ತೇನೆ. ನಮ್ಮ ಅಂಗಡಿಯಲ್ಲಿ ಮೊಬೈಲ್ ನ್ನು ರಿಪೇರಿಗಾಗಿ ತೆಗೆದುಕೊಂಡಾಗ, ರಿಪೇರಿಗಾಗಿ ಕೊಟ್ಟ ವ್ಯಕ್ತಿಯ ವಿಳಾಸ ಮತ್ತು ಫೋನ್ ನಂಬರ್ ನಮೂದು ಮಾಡಿಕೊಳ್ಳುವ ಪುಸ್ತಕವನ್ನು ಮೇನ್ ಟೇನ್ ಮಾಡಿರುವುದಿಲ್ಲ. ಪೋಲೀಸರು ನಮ್ಮ ಅಂಗಡಿಯಿಂದ ತೆಗೆದುಕೊಂಡು ಹೋಗಿದ್ದ 4-5 ಮೊಬೈಲ್ ಗಳನ್ನು ಯಾರು ತಂದು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ, ಕಾರಣ ಆ ಸಮಯದಲ್ಲಿ ನಾನು ಅಂಗಡಿಯಲ್ಲಿರಲಿಲ್ಲ. ಸದರೀ ಮೊಬೈಲ್ ಗಳನ್ನು ರಿಪೇರಿಗಾಗಿ ಕೊಟ್ಟುಹೋಗಿರುತ್ತಾರೆಂದು ನಮ್ಮ ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗರು ಹೇಳಿರುತ್ತಾರೆ. ನಿ.ಪಿ. 6 ಕ್ಕಿಂತ ಮೊದಲು ಪೋಲೀಸರು ನನಗೆ ಯಾವುದೇ ನೋಟೀಸ್ ನ್ನು ನೀಡಿರಲಿಲ್ಲ. ನಾನು ಪೋಲೀಸರ ಜೊತೆ ಶರೀಖಾಗಿ, ನಮ್ಮ ಅಂಗಡಿಯಲ್ಲಿ ರಿಪೇರಿ ಆಗದೇ ಉಳಿದಿದ್ದ ಹಳೆಯ ಮೊಬೈಲ್ ಗಳನ್ನು ನಾನೇ ಪೋಲೀಸರ ಕೋರಿಕೆಯ ಮೇರೆಗೆ ಕೊಟ್ಟು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

1 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.